# ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**


ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/00008/2017–18/1511 **ದಿನಾಂಕ: 23.05.2017**

## *– :ಸಾರಿಗೆ ವಾಹನಗಳನ್ನು ಒದಗಿಸಲು ದ್ವೈವಾರ್ಷಿಕ ಅವಧಿ ಗುತ್ತಿಗೆ ಬಗ್ಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–*

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಲು ಶೇಖರಣೆ/ದ್ರವಸಾರಜನಕ/ವೀರ್ಯನಳಿಕೆ/ಹುಲ್ಲಿನ ಬೀಜ/ಪಶುಮೇವು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ /ಲಘು ವಾಹನಗಳನ್ನು / ಇನ್ಸೂಲೆಟೆಡ್ ವಾಹನಗಳನ್ನು, ಕಚೇರಿ ಕ್ಷೇತ್ರ ಕೆಲಸ ಕಾರ್ಯಗಳಿಗಾಗಿ ಟಾಟಾ ಇಂಡಿಕಾ/ವಿಸ್ತಾ/ಇಂಡಿಗೋ ಕಾರುಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | **ದಿನಾಂಕ: 29.05.2017 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | **ದಿನಾಂಕ: 28.06.2017 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ** | **ದಿನಾಂಕ: 30.06.2017 ರಂದು ಬೆಳಿಗ್ಗೆ: 11.30 ಗಂಟೆಗೆ** |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | **ದಿನಾಂಕ: 01.07.2017 ರಂದು ಬೆಳಿಗ್ಗೆ: 11.30 ಗಂಟೆಯ ನಂತರ** |

ಈ ಕೆಳಗೆ ನಮೂದಿಸಿರುವ ಹಾಲು ಶೇಖರಣಾ ಮಾರ್ಗಗಳಿಗೆ ಸಂಘಗಳಿಂದ ಶೀತಲೀಕರಣ ಕೇಂದ್ರ/ಡೈರಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಾಲ್ ಮುಚ್ಚಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ **2005** ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ಸರಕು ಸಾಗಾಣಿಕೆ ವಾಹನ ಒದಗಿಸಲು **ಎರಡು ವರ್ಷದ ಅವಧಿ ಅಥವಾ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಮಾತ್ರ** ಮತ್ತು ಕಚೇರಿ ಕ್ಷೇತ್ರ ಕೆಲಸ ಕಾರ್ಯಗಳಿಗಾಗಿ **2010** ರ ಅಥವಾ ನಂತರದ ಮಾದರಿಯ **ಟಾಟಾ ಇಂಡಿಕಾ/ವಿಸ್ತಾ** ಕಾರುಗಳನ್ನು **02 ವರ್ಷದ ಅವಧಿಗೆ** ಮತ್ತು ದ್ರವಸಾರಜನಕ/ವೀರ್ಯನಳಿಕೆ/ಹುಲ್ಲಿನ ಬೀಜ/ಪಶುಮೇವು ಸರಬರಾಜು/ಸಾಗಾಣಿಕೆ ಮಾಡಲು **02 ವರ್ಷದ ಅವಧಿಗೆ** ಮ್ಯಾಕ್ಸ್‌ಪಿಕ್‌ಅಪ್ ವಾಹನ ಮಾಲೀಕರಿಂದ ವಾಹನಗಳನ್ನು ಬಾಡಿಗೆ/ಗುತ್ತಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯಲಾಗಿದೆ. :–

| ಮಾರ್ಗದ ಸಂಖ್ಯೆ | ಹಾಲು ಶೇಖರಣಾ/ಕಾರು/ದ್ರವಸಾರಜನಕ/ಇತರೆ ಮಾರ್ಗದ ಹೆಸರು/ವಿವರ | ವಾಹನ ಸಾಮರ್ಥ್ಯ ಟನ್‌ಗಳಲ್ಲಿ/ಮಾದರಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ) | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಕೇರುಮಲ್ಲೇಶ್ವರ–4 ಹಾಲು ಶೇಖರಣಾ ಮಾರ್ಗ (ಚಿತ್ರದುರ್ಗ ಶೀ.ಕೇಂದ್ರ ದಿಂದ ಪವನಗೊಂಡನಹಳ್ಳಿ, ಕಾಟನಾಯಕನಹಳ್ಳಿ, ಆದಿವಾಲ ಚಿತ್ರದುರ್ಗ ಸಿ.ಸಿ.) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 306 ಕಿ.ಮೀ | 25,000/– | 30,000/– |
| 2 | ತೀರ್ಥರಾಮೇಶ್ವರ–4 ಹಾಲು ಶೇಖರಣಾ ಮಾರ್ಗ (ಹೊನ್ನಾಳಿ ಶೀ.ಕೇಂದ್ರ ದಿಂದ ಜಕ್ಕಿನಕೊಪ್ಪ, ಅರಳಹಳ್ಳಿ, ಜೀನಹಳ್ಳಿ, ತುಗ್ಗಲಹಳ್ಳಿ, ಹೊನ್ನಾಳಿ ಸಿ.ಸಿ) | 2.5 ಟನ್ | 94 ಕಿ.ಮೀ | 30,000/– | 40,000/– |
| 3 | ವರದಾ ಹಾಲು ಶೇಖರಣಾ ಮಾರ್ಗ (ಆನಂದಪುರ ಶೀ.ಕೇಂದ್ರ, ನಿಸರಾಣಿ, ಮಳಲಗದ್ದೆ, ಉಳವಿ, ಬಿಳಿಸಿರಿ, ಹೊರಬೈಲು, ಆನಂದಪುರ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 224 ಕಿ.ಮೀ | 25,000/– | 30,000/– |
| 4 | ಚಂದ್ರಗುತ್ತಿ ಹಾಲು ಶೇಖರಣಾ ಮಾರ್ಗ (ತಡಗಣಿ ಶೀ.ಕೇಂದ್ರ, ಗುಡುಗಿನಕೊಪ್ಪ, ಕೌಲಿ, ತೊಗರ್ಸಿ, ಬಳ್ಳಿಗಾವಿ, ತಡಗಣಿ ಸಿ.ಸಿ. ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 62 ಕಿ.ಮೀ | 25,000/– | 30,000/– |
| 5 | ಶಿವನಪಾದ–2 ಹಾಲು ಶೇಖರಣಾ ಮಾರ್ಗ (ತಡಗಣಿ ಶೀ.ಕೇಂದ್ರ, ಮುಗಳಿಕೊಪ್ಪ, ಹಂಚಿಕೊಪ್ಪ, ಕುಸ್ಕೂರು, ತಡಗಣಿ ಶೀ.ಕೇಂದ್ರ ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 66 ಕಿ.ಮೀ | 25,000/– | 30,000/– |
| 6 | ಹೊಂಬುಜ ಹಾಲು ಶೇಖರಣಾ ಮಾರ್ಗ (ಆನಂದಪುರ ಶೀ.ಕೇಂದ್ರ ವಡಹೊಸಳ್ಳಿ, ಕಳಸೆ, ಬಸಾಪುರ, ಯಡೇಹಳ್ಳಿ, ಆನಂದಪುರ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 144 ಕಿ.ಮೀ | 25,000/– | 30,000/– |
| 7 | ಅಘೋರೇಶ್ವರ ಹಾಲು ಶೇಖರಣಾ ಮಾರ್ಗ (ಆನಂದಪುರ ಶೀ.ಕೇಂದ್ರ, ವರದಾಮೂಲ, ಆವಿನಹಳ್ಳಿ, ಕೊಳೂರು, ಹೆಬ್ಬೈಲು, ಆನಂದಪುರ ಶೀ.ಕೇಂದ್ರ,) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 236 ಕಿ.ಮೀ | 25,000/– | 30,000/– |
| 8 | ನಾರದ ಮುನಿ ಹಾಲು ಶೇಖರಣಾ ಮಾರ್ಗ (ದಾವಣಗೆರೆ ಡೈರಿ, ಬಳ್ಳಿಗನೂರು, ಕೆಸರಹಳ್ಳಿ, ಒಬಳಾಪುರ, ಅಡವಿಹಳ್ಳಿ, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 304 ಕಿ.ಮೀ | 25,000/– | 30,000/– |
| 9 | ತಡಗಣಿ ಎಂ.ವಿ.ಆರ್.–1 ಕಾರಿನ ಮಾರ್ಗ ತಡಗಣಿ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 2500 ಕಿ.ಮೀ ಮಾಸಿಕ | 10,000/– | 20,000/– |
| 10 | ತಡಗಣಿ ಎಂ.ವಿ.ಆರ್.–2 ಕಾರಿನ ಮಾರ್ಗ ತಡಗಣಿ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 2500 ಕಿ.ಮೀ ಮಾಸಿಕ | 10,000/– | 20,000/– |
| 11 | ಉಪ ವ್ಯವಸ್ಥಾಪಕರು (ಶೇ) ಕಾರಿನ ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ ಮಾಸಿಕ | 10,000/– | 20,000/– |
| 12 | ಹರಪನಹಳ್ಳಿ ಎಂ.ವಿ.ಆರ್ ಕಾರಿನ ಮಾರ್ಗ ಹರಪನಹಳ್ಳಿ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ ಮಾಸಿಕ | 10,000/– | 20,000/– |
| 13 | ದ್ರವಸಾರಜನಕ ವಿತರಣಾ ಮಾರ್ಗ (ದಾವಣಗೆರೆ ಡೈರಿಯಿಂದ ಒಕ್ಕೂಟದ ವ್ಯಾಪ್ತಿಯಲ್ಲಿರುವ ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಕೃತಕ ಗರ್ಭಧಾರಣಕೇಂದ್ರಕ್ಕೆ ದ್ರವಸಾರಜನಕ, ವೀರ್ಯನಳಿಕೆ ಸರಬರಾಜು ಮಾಡುವುದು) ದ್ರವಸಾರಜನಕ ವೀರ್ಯನಳಿಕೆ ಸರಬರಾಜು ಮಾಡಲು ಒಕ್ಕೂಟವು ಸೂಚಿಸಿದ ತರಬೇತಿ ಹೊಂದಿದ ಸಿಬ್ಬಂದಿಯನ್ನು ನೇಮಿಸಿಕೊಂಡು ಇವರಿಗೆ ಮಾಹೆಯಾನ ರೂ. 12,500/– ವೆಚ್ಚವನ್ನು ನೀಡತಕ್ಕದ್ದು. (ವಾಹನ ಮಾದರಿ 2012 ರ ಅಥವಾ ನಂತರ ಸಾಲಿನದು) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 3000 ಕಿ.ಮೀ ಮಾಸಿಕ | 25,000/– | 30,000/– |
| 14 | ಹುಲ್ಲಿನ ಬೀಜ/ಪಶುಮೇವು ಸರಬರಾಜು ವಾಹನ ಶಿವಮೊಗ್ಗ ಡೈರಿಯಿಂದ ಹುಲ್ಲಿನ ಬೀಜ/ಉಗ್ರಾಣ ಸಾಮಾಗ್ರಿಗಳನ್ನು ಒಕ್ಕೂಟದ ವ್ಯಾಪ್ತಿಯ ಮೂರು ಜಿಲ್ಲೆಗಳ ಸಂಘಗಳಿಗೆ/ಉಗ್ರಾಣಗಳಿಗೆ ಸಾಗಾಣಿಕೆ ಮಾಡುವುದು. | 2.5 ಟನ್ | 1500 ಕಿ.ಮೀ ಮಾಸಿಕ | 25,000/– | 30,000/– |

**ನಿಬಂಧನೆ ಮತ್ತು ಷರತ್ತುಗಳು**

1. **ಕ್ರ.ಸಂ 1 ರಿಂದ 14 ರವರೆಗಿನ ಹಾಲು ಶೇಖರಣೆ/ಕಾರಿನ ಮಾರ್ಗಗಳಿಗೆ ವಾಹನ ಹೊಂದಿಲ್ಲದವರು ಸಹ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
2. **ಇ-ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**
3. **ಕನಿಷ್ಠ ಇ.ಎಂ.ಡಿ. ರೂ. 10,000/- ಆದರೆ ಶೇಖರಣೆ/ಕಾರಿನ ಮಾರ್ಗದ ವಾಹನಗಳಿಗೆ, ಮ್ಯಾಕ್ಸ್ ಪಿಕ್‌ಅಪ್/ ಲಘು ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ ವಾಹನಕ್ಕೆ ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದವತಿಯಿಂದ ನೀಡಲಾಗುವುದಿಲ್ಲ.
5. ಹಾಲು ಶೇಖರಣಾ ವಾಹನಗಳು **2005** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. **ಟಾಟಾ ಇಂಡಿಕಾ/ವಿಸ್ತಾ ಕಾರುಗಳು 2010** ರ ಅಥವಾ ನಂತರ ಮಾದರಿಯ ವಾಹನ ಆಗಿರಬೇಕು. ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
6. **ಟೆಂಡರ್ ದರ ಒಪ್ಪಿಗೆಯಾದ ಕೂಡಲೇ ಹಾಲು ಸಾಗಾಣಿಕೆ ವಾಹನವನ್ನು FSSAI ಲೈಸೆನ್ಸ್/ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.** ಶೇಖರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ಶೇಖರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ಶೇಖರಣಾ, ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು. ಮ್ಯಾಕ್ಸ್‌ಪಿಕ್‌ಅಪ್ ವಾಹನಗಳು 1.5 ಟನ್ ಸಾಮರ್ಥ್ಯದವರೆಗೆ ಹಾಲನ್ನು ಸಾಗಾಣಿಕೆ ಮಾಡತಕ್ಕದ್ದು.
7. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.
8. ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
9. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
10. ದ್ರವಸಾರಜನಕ ವಿತರಣಾ ಕೆಲಸ ಕಾರ್ಯಗಳಿಗೆ ಅಧಿಕೃತ ತರಬೇತಿ ಹೊಂದಿದ ಸಿಬ್ಬಂದಿಯನ್ನು ಒಕ್ಕೂಟದಿಂದ ಸೂಚಿಸಲಾಗುವುದು. ದ್ರವಸಾರಜನಕ ವಿತರಣಾ ಗುತ್ತಿಗೆ ಪಡೆದ ಗುತ್ತಿಗೆದಾರರು ಇವರಿಂದ ದ್ರವಸಾರಜನಕ/ವೀರ್ಯನಳಿಕೆ ವಿತರಣೆ ಮಾಡಿಸುವುದು ಹಾಗೂ ಇವರಿಗೆ ಮಾಸಿಕ ರೂ. 12,500/- ಸಂಭಾವನೆಯನ್ನು ನೀಡುವುದು. ಇದನ್ನು ಕಿ.ಮೀ ದರದಲ್ಲಿ ಸೇರಿ ದರ ನಮೂದಿಸುವುದು. ಸದರಿ ಮಾರ್ಗಕ್ಕೆ 2012 ರ ಅಥವಾ ನಂತರದ ಮಾದರಿಯ ವಾಹನವನ್ನು ಒದಗಿಸುವುದು.
11. ಹುಲ್ಲಿನ ಬೀಜ, ಪಶುಆಹಾರ ಸರಬರಾಜು ವಾಹನಕ್ಕೆ ಟೆಂಡರ್ ಹಾಕುವವರು 2007 ರ ಅಥವಾ ನಂತರದ ಮಾದರಿಯ 2.5 ಟನ್ ಸಾಮರ್ಥ್ಯದ ವಾಹನ ಹೊಂದಿದ್ದು, ಹುಲ್ಲಿನ ಬೀಜ ಮೇವು ಉಗ್ರಾಣ ಸಾಮಾಗ್ರಿಗಳು ಶಿವಮೊಗ್ಗ ಕೇಂದ್ರ ಡೈರಿ ಉಗ್ರಾಣದಿಂದ ಪಡೆದು ಸೂಚಿಸಿದ ಸ್ಥಳಕ್ಕೆ ಸಾಗಿಸುವುದು. ಲೋಡಿಂಗ್/ಅನ್‌ಲೋಡಿಂಗ್ ವೆಚ್ಚ ಸೇರಿ ದರ ನಮೂದಿಸುವುದು.
12. ಹಾಲು ಶೇಖರಣೆ ಮಾರ್ಗಗಳಲ್ಲಿ ಬರುವ ಕೆಲವು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಬಿ.ಎಂ.ಸಿ. ಗಳನ್ನು ಅಳವಡಿಸಿ ಪ್ರಾರಂಭಿಸಲಾಗುತ್ತಿದೆ. ಬಿ.ಎಂ.ಸಿ. ಕೇಂದ್ರವು ಪ್ರಾರಂಭವಾದ ಕೂಡಲೇ ಅಂತಹ ಹಾಲು ಶೇಖರಣೆ ಮಾರ್ಗವನ್ನು ಸ್ಥಗಿತಗೊಳಿಸಲಾಗುವುದು. ಅಥವಾ ಮಾರ್ಗವನ್ನು ಅವಶ್ಯಕತೆಗೆ ತಕ್ಕಂತೆ ಪರಿಷ್ಕರಿಸಲಾಗುವುದು. ಈ ಷರತ್ತಿಗೆ ಬದ್ದರಾದ ವಾಹನ ಮಾಲೀಕರು/ಟೆಂಡರ್‌ದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.
13. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.
14. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ/ಮಾರುಕಟ್ಟೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ

ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : **23.05.2017**

ಸ್ಥಳ : ಮಾಚೇನಹಳ್ಳಿ